ನಿರ್ವಹಿಸಿಲ್ಲ. ಅದೇ ಹೊತ್ತಿಗೆ ಆತ ಹೊರಗೆ ಹೋಗಿರಬೇಕು ಅನ್ನಿಸುತ್ತೆ."

"ಹೊರಗೆ ಹೋಗಿದ್ದಾನೆ ಅಂತ್ಲೇ ಹೇಗೆ ಹೇಳ್ತೀರಿ? ಆ ಕಟ್ಟಡದ ಕೆಲವೇ ಜಾಗಗಳಲ್ಲಿ ಸಿಸಿಟೀವಿ ಕ್ಯಾಮೆರಾ ಇದೆ. ಉದಾಹರಣೆಗೆ ಹಿಂದಿನ ಬಾಗಿಲು, ಪ್ಯಾಸೇಜಿನಲ್ಲಿ ಸಿಸಿಟೀವಿ ಕ್ಯಾಮೆರಾ ಇಲ್ಲ. ಮೆಟ್ಟಿಲಲ್ಲಿ ಕೆಲವು ಕೋನಗಳಲ್ಲಿ ಕ್ಯಾಮೆರಾದ ಕಣ್ಣು ತಪ್ಪಿಸುವುದು ಸಾಧ್ಯ... ಇರಲಿ, ನಿಮ್ಮ ಥಿಯರಿ ಏನು?"

"ರುದ್ರಮುನಿ ಮೇಲುಗಡೆ ಹೋಗಿಲ್ಲದಿದ್ದುರಿಂದ ಆತನನ್ನು ಶಂಕಿತರ ಪಟ್ಟಿಯಿಂದ ತೆಗೆದು ಹಾಕಿದ್ದೇವೆ."

"ರುದ್ರಮುನಿ ವಾಪಸು ಹೋಗಿದ್ದಕ್ಕೆ ವಿವರಣೆ ನೀಡಿದನೆ?"

"ಆತ ಪಾಲಯ್ಯನನ್ನು ನೋಡಿ ಹೆದರಿಕೆಯಾಗಿ, ಪಲಾಯನ ಮಾಡ್ದೆ ಅಂತಾನೆ. ಅವ್ನ ವಿವರಣೆ ನಂಬಲರ್ಹ ಅಂತ ಅನ್ನಿಸ್ತು. ಈಗ ಶಂಕಿತರ ಪಟ್ಟಿಯಲ್ಲಿರುವವರು ಪಾಲಯ್ಯ ಮತ್ತು ಬೆಟ್ಟಪ್ಪ. ಪಾಲಯ್ಯ ಒಂದೊಮ್ಮೆ ಸೋಮಯ್ಯನನ್ನು ಭೇಟಿಯಾಗಿದ್ದರೆ, ಅವ್ನೇ ಸೋಮಯ್ಯನನ್ನು ಕಡೆಯದಾಗಿ ಕಂಡ ಆಸಾಮಿಯಾಗುತ್ತಾನೆ. ಆತ ಮೊದಲ ಶಂಕಿತನಾಗುತ್ತಾನೆ..."

"ಕೊಲೆ ಎಷ್ಟು ಹೊತ್ತಿಗೆ ಆಯ್ತು ಅಂತ ಪೋಸ್ಟ್ ಮಾರ್ಟಂ ವರದಿ ಹೇಳುತ್ತೆ?"

"ಪೂರ್ಣ ವರದಿ ಕೈ ಸೇರಬೇಕಷ್ಟೇ. ಸರಿ ಸುಮಾರು ಹನ್ನೊಂದರಿಂದ ಹನ್ನೆರಡರ ಒಳಗೆ ಸಾವು ಸಂಭವಿಸಿದೆ ಅಂತ ಪ್ರಾಥಮಿಕ ವರದಿ ಹೇಳುತ್ತೆ... ಅದು ಪಾಲಯ್ಯ ಭೇಟಿಯಾದ ಸಮಯ..."

"ಪಾಲಯ್ಯ ಕಟ್ಟಡದಿಂದ ಎಷ್ಟು ಹೊತ್ತಿಗೆ ಹೊರಬಿದ್ದ ಅನ್ನೋದು ಸಿಸಿಟೀವಿ ಕ್ಯಾಮೆರಾದಲ್ಲಿ ದಾಖಲಾಗಿದೆಯೆ?"

"ಸುಮಾರು ಹನ್ನೊಂದು ಐವತ್ತರ ವೇಳೆಗೆ ಆತ ಲಿಫ್ಟ್ ಪ್ರವೇಶಿಸಿದ್ದು ದಾಖಲಾಗಿದೆ."

"ಹಾಗಿದ್ರೆ ಕೊಲೆ ಆ ನಂತರವೂ ಆಗಿರಬಹುದಲ್ವೇ? ಮತ್ತೆಯೂ ಹತ್ತು ನಿಮಿಷಗಳ ಸಮಯವಿದೆ..."

"ನೀವನ್ನುವುದು ರುದ್ರಮುನಿ ಕೊಲೆ ಮಾಡ್ದ ಅಂತಲೇ? ಆದ್ರೆ ಆತ ಮೇಲೆ ಬಂದಿದ್ದು ಎಲ್ಲೂ ಕಾಣಿಸ್ತಿಲ್ಲ. ರುದ್ರಮುನಿ ಕುಳ್ಳ ಆಸಾಮಿಯಾಗಿದ್ದರಿಂದ, ನೀವು ಹೇಳಿದಂತೆ, ಕ್ಯಾಮೆರಾ ಕಣ್ಣು ತಪ್ಪಿಸಿ, ಮೇಲೇರಿ ಬಂದಿದ್ದರೂ, ಮೆಟ್ಟಿಲು ಪ್ಯಾಸೇಜು ಸೇರುವಲ್ಲಿದ್ದ ಕ್ಯಾಮೆರಾದ ಕಣ್ಣು ತಪ್ಪಿಸುವುದು ಸಾಧ್ಯವಿಲ್ಲ. ಹಾಗಾಗಿ, ಆತನನ್ನು ನಾವು ಪರಿಗಣಿಸಲು ಆಗೋದಿಲ್ಲ."

"ಆ ದಿನ ಉತ್ತಯ್ಯ ಬಿಟ್ಟಂಗಾಲದಲ್ಲಿ ಇದ್ದಿದ್ದಕ್ಕೆ ಸಾಕ್ಷಿ ಇದೆಯೆ?"

"ಹೂಂ. ಎರಡು ಸಾಕ್ಷಿ. ಆತನ ಬಿಟ್ಟಂಗಾಲದ ಮಿತ್ರ ಹೇಳ್ದ. ಇನ್ನೊಂದು, ಆತನ ಮೊಬೈಲಿನ ಲೊಕೇಶನ್. ಅದೂ ಬಿಟ್ಟಂಗಾಲದಲ್ಲಿತ್ತು."

"ಹಾಗಿದ್ರೆ ಪಾಲಯ್ಯ ಸಿಕ್ಕಿದರೆ ಪ್ರಕರಣ ಮುಗಿದ ಹಾಗೆಯೆ!"

"ಬಹುತೇಕ ಹಾಗೇ ಅನ್ನಿಸುತ್ತೆ. ನಿಮ್ಗೆ ಕ್ಯಾಮೆರಾ ಫೂಟೇಜು ಕೊಟ್ಟು ಹೋಗೋಣ ಅಂತ ಬಂದೆ."

ಅದನ್ನು ಪೆನ್ ಡ್ರೈವಿನಲ್ಲಿ ನೀಡಿ, ಡಿಸೋಜ ತೆರಳಿದ.

"ಕರಮಚಂದ, ನನಗೊಂದು ಅನುಮಾನ. ನಮ್ಮ ತನಿಖೆ ತಪ್ಪು ದಾರಿಯಲ್ಲಿ ಸಾಗುತ್ತಾ ಇದೆಯಾ ಅಂತ?"

"ಯಾಕೆ?"

"ಆ ಮೂವರಲ್ಲೇ ಒಬ್ಬ ಕೊಲೆಗಾರ ಯಾಕಾಗಿರಬೇಕು? ನಾಲ್ಕನೆಯವನೊಬ್ಬ ಕೊಲೆ ಮಾಡಿರಬಹುದಲ್ಲವೆ?"

"ಒಳ್ಳೆಯ ಪ್ರಶ್ನೆ. ನೀನು ಹೇಳಿರುವ ಸಾಧ್ಯತೆ ಇರಲೂಬಹುದು. ಆದರೆ ಅದಕ್ಕೆ ಕೆಲವು ಆಕ್ಷೇಪಗಳಿವೆ.